**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ "ಉತ್ತರ ಕನ್ನಡ ಜಿಲ್ಲೆಯ ಕೆನರಾ ವೃತ್ತದ ಕುಳಗಿ ವಲಯದ ಯೋಗೇಶ್ ನಾಯ್ಕ ಹೆಸರಿನ ಉಪ ವಲಯ ಅರಣ್ಯ ಅಧಿಕಾರಿ ಸಾಗವಾನಿ ಗಿಡ ನೆಡುವಾಗ ಕೀಟಗಳು ಸಸಿಗಳನ್ನು ಹಾಳುಗೇಡಬಾರದೆಂದು ವಿಷಪುರಿತ ಕೀಟ ನಾಶಕವನ್ನು ಸಿಂಪಡಿಸಿ ನಂತರ ಕೈಯನ್ನು ಸರಿಯಾಗಿ ತೋಳೆಯದೆ ಆಹಾರವನ್ನು ಸೇವಿಸಿ ಅನಾರೋಗ್ಯಕ್ಕೆ ತುತ್ತಾಗಿ ಮೃತಪಟ್ಟ ದುರ್ಘಟನೆ ದಿನಾಂಕ:07-07-2023ರಂದು ನಡೆದಿದ್ದು ಪತ್ರಿಕೆ ಮತ್ತು ಸಾಮಾಜಿಕ ಜಾಲತಾಣದಲ್ಲಿ ವರದಿಯಾಗಿದೆ. ಈ ಅವಘಡಕ್ಕೆ ಕಾರಣ ಯಾರು? ಹಾಗೂ ಇಷ್ಟು ವಿಷಪುರತ ಕೀಟನಾಶಕವನ್ನು ಬಳಸಲು ಅರಣ್ಯ ಇಲಾಖೆಗೆ ಅನುಮತಿ ಇದೇಯೇ? ಅರಣ್ಯ ಬೆಳೆಸುವ ಭರದಲ್ಲಿ ಜೀವ ವೈವಿಧ್ಯಗಳಿಗೆ ಹಾನಿ ಉಂಟಾಗುತ್ತಿಲ್ಲವೇ? ಎಂಬ ವಿಷಯದ ಬಗ್ಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

******

ಹಳಿಯಾಳ ಅರಣ್ಯ ವಿಭಾಗದ ವಿರ್ನೋಲಿ ವಲಯದ ಕುಳಗಿ ಶಾಖೆಯಲ್ಲಿ ಉಪ ವಲಯ ಅರಣ್ಯ ಅಧಿಕಾರಿ-ಕಂ-ಮೋಜಣಿದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಯೋಗೇಶ ಗಣಪತಿ ನಾಯ್ಕ, ವಯಸ್ಸು 33 ವರ್ಷ, ಇವರಿಗೆ ಆರೋಗ್ಯದಲ್ಲಿ ಏರುಪೇರು ಆಗಿರುವುದರಿಂದ ದಿನಾಂಕ: 27-06-2023 ರಂದು ದಾಂಡೇಲಿಯಲ್ಲಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ದಿನಾಂಕ:29-06-2023 ರಿಂದ 07-07-2023ರವರೆಗೆ ಎಸ್.ಡಿ.ಎಂ ಆಸ್ಪತ್ರೆ, ಧಾರವಾಡ ಮತ್ತು ಸುಚಿರಾಯು ಆಸ್ಪತ್ರೆ, ಹುಬ್ಬಳ್ಳಿಯಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗಿರುತ್ತದೆ. ಆದರೆ, ವೈದ್ಯರು ಸಾಕಷ್ಟು ಮುತುವರ್ಜಿ ವಹಿಸಿ ಸದರಿಯವರಿಗೆ ಚಿಕಿತ್ಸೆ ನೀಡಿದರೂ, ಚಿಕಿತ್ಸೆ ಫಲಕಾರಿಯಾಗದೇ ಸದರಿಯವರು ಶುಕ್ರವಾರ ದಿನಾಂಕ:07-07-2023ರ ಸಂಜೆ ವಿಧಿವಶರಾಗಿರುತ್ತಾರೆ.

ಸದರಿ ಪ್ರಕರಣದಲ್ಲಿ ಸದರಿಯವರ ತಮ್ಮನಾದ ಶ್ರೀ ವಿನೋದ್ ನಾಯ್ಕ ಬಿನ್. ಗಣಪತಿ ನಾಯ್ಕ, ಬಾಡಾ, ಕುಮುಟಾ, ಉತ್ತರ ಕನ್ನಡ ಜಿಲ್ಲೆ ಇವರು ಅಂಬಿಕಾ ನಗರ ಪೋಲೀಸ ಠಾಣೆಯಲ್ಲಿ ನೀಡಿರುವ ದೂರಿನ ಆಧಾರದ ಮೇಲೆ UDR No-02/2023 ದಿನಾಂಕ:07-07-2023ರಂತೆ ಪ್ರಕರಣವು ದಾಖಲಾಗಿದ್ದು, ಪೋಲೀಸರು ಪ್ರಕರಣದ ತನಿಖೆಯನ್ನು ನಡೆಸುತ್ತಿದ್ದಾರೆ. ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ನಡೆಸಿದ್ದು ವೈದ್ಯರು ಮರಣೋತ್ತರ ಪರೀಕ್ಷೆ ವರದಿಯನ್ನು Medico Legal Case ಆಗಿರುವುದರಿಂದ ಎರಡು ದಿನಗಳ ನಂತರ ನೇರವಾಗಿ ಪೋಲೀಸ್ ಠಾಣೆಗೆ ನೀಡಲಾಗುವುದು ಎಂದು ತಿಳಿಸಿರುತ್ತಾರೆ.

ಅರಣ್ಯ ಇಲಾಖೆಯಲ್ಲಿನ ಸಸ್ಯಪಾಲನಾ ಕ್ಷೇತ್ರಗಳಲ್ಲಿ ಸಸಿಗಳಿಗೆ ಕೀಟಬಾಧೆ ಅಥವಾ ರೋಗಬಾಧೆ ಕಂಡಾಗ ಅವುಗಳನ್ನು ನಿಯಂತ್ರಿಸಲು ಕೀಟ ನಾಶಕಗಳನ್ನು ಬಳಸುವುದು ಸಾಮಾನ್ಯವಾಡಿಕೆಯಾಗಿರುತ್ತದೆ. ಅರಣ್ಯ ಪ್ರದೇಶಗಳಲ್ಲಿ ಕೀಟನಾಶಕಗಳನ್ನು ಬಳಸಲಾಗುತ್ತಿಲ್ಲ. ಅಲ್ಲದೇ, ಕಳೆ ನಾಶಕಗಳನ್ನು ಬಳುಸುವ ಕುರಿತಂತೆ ಯಾವುದೇ ಆದೇಶ ಅಥವಾ ಸೂಚನೆ ಇರುವುದಿಲ್ಲ. ಕೀಟಾ ನಾಶಕಗಳನ್ನು ಸಸ್ಯ ಕ್ಷೇತ್ರಗಳಲ್ಲಿ ಮಾತ್ರ ಬಳಸುವುದರಿಂದ, ಅದರಲ್ಲೂ ಅಲ್ಪ ಪ್ರಮಾಣದಲ್ಲಿ ಬಳಸುವುದರಿಂದ ಅರಣ್ಯ ಜೀವವೈವಿಧ್ಯಗಳಿಗೆ ಹಾನಿಯಾಗುವ ಸಾಧ್ಯತೆಗಳು ಅತೀ ಕಡಿಮೆ ಇರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ಯಾವ ರಾಸಾಯನಿಕ (Chemical) ಹಾಗೂ ಯಾವ ಪರಿಸ್ಥಿತಿಯಲ್ಲಿ ಈ ರಾಸಾಯನಿಕ (Chemical) ಸದರಿಯವರ ದೇಹದೊಳಗೆ ಪ್ರವೇಶಿಸಿ ಅವರ ನಿಧನಕ್ಕೆ ಕಾರಣವಾಗಿರುತ್ತದೆ ಎಂದು ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಪೊಲೀಸ್ ತನಿಖಾ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪ್ರಕರಣದಲ್ಲಿನ ಪೊಲೀಸ್ ಎಫ್.ಐ.ಆರ್. ಪ್ರತಿ, ದೂರಿನ ಪ್ರತಿ, KIMS ಆಸ್ಪತ್ರೆ, ಹುಬ್ಬಳ್ಳಿಯಿಂದ ವಿದ್ಯಾನಗರ ಪೊಲೀಸ್ ಠಾಣೆಗೆ ಸಲ್ಲಿಸಿರುವ Medico-Legal Intimation to Investigating Officer ಪ್ರತಿ ಒದಗಿಸಲಾಗಿದೆ.

**ಇ-ಸಂಖ್ಯೆ: ಅಪಜೀ 78 ಎಫ್‌ಡಬ್ಲ್ಯೂಎಲ್ 2023**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು